ನಿಮ್ಮೊಡನೆ

**ಪ್ರಸಕ್ತ ದಶಕದಲ್ಲಿ ಆಹಾರ ಪದಾರ್ಥಗಳಿಗೆ ಭಾರಿ ಬೆಲೆ ತೆರಲು ಗ್ರಾಹಕರು ಸಜ್ಜಾಗಬೇಕಿದೆ. ಬದುಕಿನ ಮೂಲ ಅವಶ್ಯಕತೆಯಾದ ಆಹಾರದ ಬೆಲೆ ಏರಿಕೆ, ಬರಲಿರುವ ದಿನಗಳಲ್ಲಿ ದೊಡ್ಡ ಜಾಗತಿಕ ಬಿಕ್ಕಟ್ಟಾಗಿ ಪರಿಣಮಿಸಲಿದೆ.**

# ಎಷ್ಟೊಂತ ಬೆಲೆ ಏರಿಸ್ತೀರಿ?

ಮುಂದಿನ ದಿನಗಳಲ್ಲಿ ಆಹಾರ ಬೆಲೆಗಳ ತೀವ್ರ ಏರಿಕೆಯನ್ನು ಅನುಭವಿಸಬೇಕಾದ ಪರಿಸ್ಥಿತಿ ಇದೆ. ಈ ವರ್ಷದ ಆರಂಭದಲ್ಲೇ ಬೆಲೆಗಳು ಗಗನಕ್ಕೇರಿದ್ದವು. ಈಗ ಮುಂಗಾರು ಮಳೆ ಚೆನ್ನಾಗಿ ಬಿದ್ದಲ್ಲಿ ಒಂದಷ್ಟು ಬೆಲೆ ಇಳಿಯಬಹುದು. ಆದರೆ ದೀರ್ಘಕಾಲೀನ ಬೆಳವಣಿಗೆಯಲ್ಲಿ ದುಬಾರಿ ಬೆಲೆಗಳಿಗೆ ಗ್ರಾಹಕರು ಸಜ್ಜಾಗಬೇಕಿದೆ. 2001–10ರ ದಶಕಕ್ಕೆ ಹೋಲಿಸಿದರೆ ಪ್ರಸಕ್ತ ದಶಕ (2011– 2020)ದಲ್ಲಿ ಬೇಳೆಕಾಳುಗಳ ಬೆಲೆಗಳು ಶೇಕಡಾ 20ರಷ್ಟು ಹೆಚ್ಚಬಹುದು. ಮಾಂಸದ ಪದಾರ್ಥಗಳ ಬೆಲೆಗಳು ಶೇಕಡಾ 30ರಷ್ಟು ಹೆಚ್ಚಳವಾಗಬಹುದು. ಒಟ್ಟಾರೆ ಪ್ರವೃತ್ತಿ ಏರಿಕೆಯದೇ– ಹೀಗೆಂದು ಬೆಲೆ ಬಿಸಿಯ ಬಗ್ಗೆ 'ಮುನ್ನೋಟದ ವರದಿ' ನೀಡಲಾಗಿದೆ. ಈ ವರದಿ ನೀಡಿರುವ ಸಂಸ್ಥೆಗಳು – ಅಮೆರಿಕ ಹಾಗೂ ಜರ್ಮನಿ ಸೇರಿದಂತೆ ಬಹುತೇಕ ಅಭಿವೃದ್ಧಿ ಹೊಂದಿದ 34 ರಾಷ್ಟ್ರಗಳ ಸದಸ್ಯತ್ವ ಹೊಂದಿರುವ ಓಇಸಿಡಿ (ಆರ್ಥಿಕ ಸಹಕಾರ ಹಾಗೂ ಅಭಿವೃದ್ಧಿ ಸಂಘಟನೆ)ಮತ್ತು ವಿಶ್ವಸಂಸ್ಥೆಯ ಎಫ್‌ಎಓ (ಆಹಾರ ಹಾಗೂ ಕೃಷಿ ಸಂಘಟನೆ).

ಬೇಡಿಕೆ, ಬಳಕೆ, ಸಾರಿಗೆ ವೆಚ್ಚ ಹಾಗೂ ಜನಸಂಖ್ಯೆ ಬೆಳವಣಿಗೆ– ಈ ಎಲ್ಲಾ ಸೂಚ್ಯಂಕಗಳನ್ನು ವಿಶ್ಲೇಷಿಸಿ ಮುಂದಿಟ್ಟಿರುವ ಈ ಲೆಕ್ಕಾಚಾರ, ಬರಲಿರುವ ದಿನಗಳಲ್ಲಿ ಜನಸಾಮಾನ್ಯರಿಗೆ ಬದುಕು ಭಾರವಾಗುವ ಸೂಚನೆಯನ್ನಂತೂ ನೀಡಿದೆ. ಜಾಗತಿಕವಾಗಿ ಎದುರಿಸಬೇಕಾದಂತಹ ದೊಡ್ಡ ಬಿಕ್ಕಟ್ಟಾಗಿಯೂ ಇದು ಪರಿಣಮಿಸಲಿದೆ.

ಈ ಬೆಲೆಗಳ ಏರಿಕೆಗೆ ಕಾರಣವಾದರೂ ಏನು? ಮೊದಲನೆಯದು ಪ್ರವರ್ಧಮಾನಕ್ಕೆ ಬರುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಆದಾಯ. ಮತ್ತೊಂದು, ಜೈವಿಕ ಇಂಧನಕ್ಕೆ ಕುದುರುತ್ತಿರುವ ಬೇಡಿಕೆ. 'ಜೈವಿಕ ಇಂಧನಗಳ ತಯಾರಿಕೆಗೆ ಆಹಾರ ಉತ್ಪನ್ನಗಳನ್ನು ಬಳಸುವ ಪ್ರವೃತ್ತಿ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಲಿದೆ' ಎನ್ನುತ್ತದೆ ಈ ವರದಿ. ಜೊತೆಗೆ ಕೃಷಿ ಉತ್ಪಾದನೆಯಲ್ಲಿ ಇಳಿಮುಖ ಪ್ರವೃತ್ತಿಯೂ ಕಂಡು ಬರಲಿದೆ. ಈ ದಶಕದಲ್ಲಿ ಜಾಗತಿಕ ಕೃಷಿ ಉತ್ಪಾದನೆಯ ಬೆಳವಣಿಗೆ ದರ ವಾರ್ಷಿಕ ಶೇಕಡಾ 1.7 ಎಂದು ನಿರೀಕ್ಷಿಸಲಾಗಿದೆ. ಕಳೆದ ದಶಕದಲ್ಲಿ ಇದು ಶೇ 2.6ರಷ್ಟಿತ್ತು. 2020ರೊಳಗೆ, ಜಾಗತಿಕ ಧಾನ್ಯ ಉತ್ಪಾದನೆಯಲ್ಲಿ ಶೇಕಡಾ 13ರಷ್ಟು, ಜಾಗತಿಕ ತೈಲ ಉತ್ಪಾದನೆಯಲ್ಲಿ ಶೇಕಡಾ 15ರಷ್ಟು ಹಾಗೂ ಜಾಗತಿಕ ಕಬ್ಬು ಉತ್ಪಾದನೆಯಲ್ಲಿ ಶೇಕಡಾ 30ರಷ್ಟನ್ನು ಜೈವಿಕ ಇಂಧನ ತಯಾರಿಕೆಗೆ ಬಳಸುವಂತಹ ಪರಿಸ್ಥಿತಿ ಉಂಟಾಗಲಿದೆ. ಹೆಚ್ಚುತ್ತಿರುವ ತೈಲ ಬೆಲೆಗಳ ಕಾರಣದಿಂದಾಗಿ, ಜೈವಿಕ ಇಂಧನ ಉತ್ಪಾದನೆಗೆ ಕೃಷಿ ಸಾಮಗ್ರಿಗಳನ್ನು ಬಳಸುವ ಪ್ರವೃತ್ತಿ ಜಗತ್ತಿನಲ್ಲಿ ಹೆಚ್ಚಾಗಲಿದೆ ಎನ್ನಲಾಗಿದೆ.

ಇದೇ ಸಂದರ್ಭದಲ್ಲಿ, ಜನಸಂಖ್ಯೆಯ ಏರಿಕೆ ಹಾಗೂ ಜನರಲ್ಲಿ ಹೆಚ್ಚುತ್ತಿರುವ ಆದಾಯಗಳಿಂದಾಗಿಯೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಾತ್ರ ಬೇಡಿಕೆ ಯಥಾಸ್ಥಿತಿಯೇ ಇರುತ್ತದೆ; ಹೀಗಿದ್ದೂ ಇಲ್ಲಿ ತಲಾ ವ್ಯಕ್ತಿ ಬಳಸುವ ಆಹಾರ ಪ್ರಮಾಣವೇ ಅಧಿಕ ಇರುತ್ತದೆ. ಪ್ರವಾಹ, ಬರ ಮುಂತಾದ ನೈಸರ್ಗಿಕ ವಿಕೋಪಗಳು ಹಾಗೂ ಸಟ್ಟಾ ಖರೀದಿ ವ್ಯವಹಾರಗಳೂ ಬೆಲೆಗಳ ಏರಿಕೆಗೆ ಕಾರಣವಾಗುತ್ತಿರುವ ಇನ್ನಷ್ಟು ಅಂಶಗಳು.

ಜಗತ್ತಿನಾದ್ಯಂತ ಆಹಾರ ಬೆಲೆಗಳು ಈ ವರ್ಷದ ಫೆಬ್ರುವರಿಯಲ್ಲೂ ದಾಖಲೆ ಪ್ರಮಾಣದಲ್ಲಿ ಏರಿದ್ದವು. 2008ರಲ್ಲಂತೂ ತೀವ್ರತರವಾಗಿ ಏರಿದ ಆಹಾರ ಬೆಲೆಗಳಿಂದಾಗಿ ವಿವಿಧ ಖಂಡಗಳ 20 ರಾಷ್ಟ್ರಗಳಲ್ಲಿ ಸಂಘರ್ಷ, ದೊಂಬಿಗಳು ಉಂಟಾಗಿದ್ದವು. 'ಬೆಲೆಗಳ ಏರಿಕೆ ರೈತರಿಗೆ ಒಳ್ಳೆಯ ಸುದ್ದಿ ಇರಬಹುದು. ಆದರೆ, ಆಹಾರದ ಮೇಲೆ ತಮ್ಮ ಗಳಿಕೆಯ ಬಹಳಷ್ಟು ಹಣ ವ್ಯಯಿಸುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಬಡವರ ಮೇಲೆ ಇದರಿಂದಾಗುವ ಪರಿಣಾಮ ವಿನಾಶಕಾರಿ' ಎಂಬುದು ಓಇಸಿಡಿ ಅಭಿಪ್ರಾಯ. ಇದು ರಾಜಕೀಯ ಅಸ್ಥಿರತೆ, ಬರ ಹಾಗೂ ಉಪವಾಸಗಳಿಗೂ ಕಾರಣವಾಗಬಹುದು. 'ವಿಶ್ವದಾದ್ಯಂತ ಏಳು ಜನರಲ್ಲಿ ಒಬ್ಬರು ಎಂದರೆ 92.5 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ' ಎನ್ನುತ್ತದೆ ಬಡತನದ ವಿರುದ್ಧ ಕೆಲಸ ಮಾಡುತ್ತಿರುವ 'ಆಕ್ಸ್‌ಫಾಮ್' ಸಂಸ್ಥೆಯ ವರದಿ. ಆಹಾರ ಬೆಲೆಗಳು ಹೀಗೆಯೇ ಹೆಚ್ಚುತ್ತಾ ಹೋದರೆ ಜನರು ಏನನ್ನು ತಿನ್ನಬೇಕು? ಸುಸ್ಥಿರ ಅಭಿವೃದ್ಧಿಗಾಗಿ ಸರ್ಕಾರಗಳ ಆದ್ಯತೆಗಳನ್ನು ಬದಲಿಸಬೇಕಾದ ತುರ್ತು ಸಂದರ್ಭ ಇದು.

■ ಸಿ.ಜಿ. ಮಂಜುಳಾ

